**ಎಂ ವಿ ಸಿ 1776/2023 ಪಿಡಬ್ಲ್ಯೂ3**

**ಸಾಕ್ಷಿಯನ್ನು ದಿ: 04.08.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ ಎಸ್ ಎಂ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ ಕೆ ಪಿ ವಕೀಲರಿಂದಃ**

ನನ್ನ ಊರು ಮೈಸೂರು. ನಾನು ಬೆಮಲ್ ಕಡೆಯಿಂದ ಬೆಳಗೊಳ ಕಡೆಗೆ ಬರುತ್ತಿದ್ದೆ. ನಾನು ರಮೇಶನ ಗಾಡಿಯ ಮೇಲೆ ಬರುತ್ತಿದ್ದೆ. ದಿನೇಶ ನಮ್ಮ ಮುಂದೆ ಸ್ವಲ್ಪ ದೂರದಲ್ಲಿ ಹೋಗುತ್ತಿದ್ದ. ಕಣ್ಣಿಗೆ ಕಾಣಿಸುವಷ್ಟು ದೂರದಲ್ಲಿ ಹೋಗುತ್ತಿದ್ದ. ಆಗ ಸಮಯ 7.00 ಗಂಟೆಯಾಗಿತ್ತು, ಅಷ್ಟೇನು ಕತ್ತಲು ಆಗಿರಲಿಲ್ಲ. ನಮ್ಮ ಹಿಂದಿನಿಂದ ಬಂದ ಕಾರು ನಮ್ಮನ್ನು ಓವರ್ ಟೇಕ್ ಮಾಡಿಕೊಂಡು ಮುಂದೆ ಹೋಗಿ ಹರೀಶನ ಗಾಡಿಗೆ ಅಪಘಾತಪಡಿಸಿತು. ಹರೀಶನ ಗಾಡಿಗೆ ಗುದ್ದಿ ವೇಗವಾಗಿ ಹೊರಟು ಹೋಯಿತು. ಹರೀಶನ ಗಾಡಿಗೆ ಗುದ್ದಿ ಹೋದ ಕಾರಿನ ನೋಂದಣಿ ಸಂಖ್ಯೆಯನ್ನು ನಾನು ನೋಡಲಿಲ್ಲ. ಪೊಲೀಸರು ನನ್ನನ್ನು ಮರು ದಿನ ಕರೆಸಿದ್ದರು. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡರು. ಅಪಘಾತ ಆದ ದಿನವೇ ರಾತ್ರಿ 11.00 ಗಂಟೆಗೆ ಪೊಲೀಸರು ನನ್ನನ್ನು ಕರೆಸಿಕೊಂಡು ಹೇಳಿಕೆ ಪಡೆದುಕೊಂಡರು. ಸ್ಥಳ ಮಹಜರು ಕಾಲದಲ್ಲಿ ಮತ್ತು ಶವ ಪರೀಕ್ಷಾ ಕಾಲದಲ್ಲಿ ನನ್ನ ಸಹಿ ಪಡೆದುಕೊಂಡರು. ನಾನು ಸ್ಥಳಕ್ಕೆ ಹೋಗಿದ್ದೆ. ಅಪಘಾತ ನಡೆದ ಸ್ಥಳದ ರಸ್ತೆಯು ಸುಮಾರು 60 ಅಡಿ ಅಗಲ ಇತ್ತು.

ಆ ರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತವೆ ಎಂದರೆ ಸರಿಯಲ್ಲ. ಕಾರು ಅಮಾನತ್ತು ಮಹಜರು ಕಾಲದಲ್ಲಿ ನಾನು ಹಾಜರಿದ್ದು ಮಹಜರಿಗೆ ಸಹಿ ಮಾಡಿದ್ದೇನೆ. ಈಗ ನನಗೆ ತೋರಿಸಿದ ಕಾರು ಅಮಾನತ್ತು ಮಹಜರಿನಲ್ಲಿ ನನ್ನ ಸಹಿ ಇಲ್ಲ. ಸದರಿ ಅಮಾನತ್ತು ಮಹಜರನ್ನು ನಿಶಾನೆ ಪಿ1(1) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳ ಮಹಜರು ನಡೆಸಿದ ಕಾಲದಲ್ಲಿ ನಾನು ಹಾಜರಿದ್ದೆ. ಪೊಲೀಸರು ಮಹಜರಿನಲ್ಲಿ ಇರುವ ಸಂಗತಿಗಳನ್ನು ಓದಿ ಹೇಳಿದರು. ಈಗ ಮರೆತಿದ್ದೇನೆ. ನಾನು ಅಪಘಾತ ನೋಡದೆ ಇದ್ದರೂ ಸಹ ಅರ್ಜಿದಾರರು ನಮ್ಮ

ಸಂಬಂಧಿಕರಾಗಿರುವ ಕಾರಣ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯ ಸಂಗತಿಗಳು ಸರಿ ಇವೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಇಂಗ್ಲೀಷನಲ್ಲಿ ಸಹಿ ಮಾಡುವುದನ್ನು ಕಲಿತುಕೊಂಡಿದ್ದೇನೆ. ಮೃತ ಹರೀಶ ದ್ವಿಚಕ್ರ ವಾಹನವನ್ನು ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ರಸ್ತೆಯ ಬದಿಯ ಮಣ್ಣಿನ ದಿಬ್ಬಕ್ಕೆ ಡಿಕ್ಕಿ ಮಾಡಿ ಬಿದ್ದು ಗಾಯಗೊಂಡು ಮೃತಪಟ್ಟಿದ್ದಾನೆ ಎಂದರೆ ಸರಿಯಲ್ಲ. ಮೃತ ಹರೀಶ ಸ್ವತಃ ತಾನೇ ಅಪಘಾತ ಮಾಡಿಕೊಂಡು ಮೃತನಾಗಿರುವ ಕಾರಣ ಆತನಿಗೆ ಪರಿಹಾರ ಸಿಗುವುದಿಲ್ಲವಾದ್ದರಿಂದ ನಾನು, ಕಾರಿನ ಮಾಲೀಕರು, ಪೊಲೀಸರು ಮತ್ತು ಇತರರು ಪರಸ್ಪರ ಷರೀಕ್ಕಾಗಿ ಅರ್ಜಿದಾರರಿಗೆ ಪರಿಹಾರ ಸಿಗಲಿ ಎಂದು ಕೆಎ 09 ಜೆಡ್ 1122 ನೋಂದಣಿ ಸಂಖ್ಯೆಯ ಕಾರನ್ನು ವಿನಾಕಾರಣ ಕೇಸಿನಲ್ಲಿ ಸಿಲುಕಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇವೆ ಸರಿಯಲ್ಲ.

ಮೃತ ಹರೀಶರವರ ದ್ವಿಚಕ್ರ ವಾಹನವನ್ನು ನೋಡಿದ್ದೆ. ಸದರಿ ದ್ವಿಚಕ್ರ ವಾಹನದ ಮುಂಭಾಗ ಮತ್ತು ಹಿಂಭಾಗದ ಸ್ವಲ್ಪ ಜಖಂಗೊಂಡಿತ್ತು. ಮೃತ ಹರೀಶ ನಮಗಿಂತ ತುಂಬಾ ದೂರದಲ್ಲಿ ಹೋಗುತ್ತಿದ್ದ ಕಾರಣ ನಾನು ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಕೆಎ 09 ಜೆಡ್ 1122 ನೋಂದಣಿ ಸಂಖ್ಯೆಯ ಕಾರು ಯಾವುದೇ ಅಪಘಾತ ಮಾಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**